# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಕವಟಗಿಮಠ್ ಮಹಾಂತೇಶ್ ಮಲ್ಲಿಕಾರ್ಜುನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 857 |
| ಉತ್ತರಿಸಬೇಕಾದ ದಿನಾಂಕ | : | 09.03.2021 |
| ಉತ್ತರಿಸಬೇಕಾದ ಸಚಿವರು | : | ಸಹಕಾರ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಹಕಾರ ಸಂಘದ ಕಾಯ್ದೆಯಡಿ ನೋಂದಣಿಯಾದ ಗೃಹ ನಿರ್ಮಾಣ ಸಂಘಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರಡಿಯಲ್ಲಿ ದಿನಾಂಕ:31-01-2021 ರ ಅಂತ್ಯಕ್ಕೆ ಒಟ್ಟು 1807 ಗೃಹ ನಿರ್ಮಾಣ ಸಹಕಾರ ಸಂಘಗಳು ನೊಂದಣಿಯಾಗಿದ್ದು, ಈ ಪೈಕಿ ಕಾರ್ಯನಿರ್ವಹಿಸುತ್ತಿರುವ, ಸಮಾಪನೆಗೊಂಡಿರುವ ಮತ್ತು ಸ್ಥಗಿತಗೊಂಡಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ -1** ರಲ್ಲಿ ನೀಡಲಾಗಿದೆ. |
| ಆ) | ಸದರಿ ಗೃಹ ನಿರ್ಮಾಣ ಸಂಘಗಳ ನೋಂದಣಿಗೆ ಹಾಗೂ ಕಾರ್ಯನಿರ್ವಹಣೆಗೆ ಇರುವ ನಿಯಮಗಳೇನು; (ವಿವರ ನೀಡುವುದು) | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ 3 ರಂತೆ ನೋಂದಣಿಯ ವಿಹಿತ ವಿಧಾನದ ರೀತ್ಯಾ ಹೊಸದಾಗಿ ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ಸ್ಥಾಪಿಸಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 6 ರಂತೆ ನೋಂದಣಿಗಾಗಿ ಅರ್ಜಿ ಸಲ್ಲಿಸಿದ ನಂತರ ನಿಯಮಾನುಸಾರ ಪರಿಶೀಲಿಸಿ ಸಾಧ್ಯತಾ ವರದಿಯನ್ನು ಪಡೆದು ಕಾರ್ಯವ್ಯಾಪ್ತಿಯನ್ನಾಧರಿಸಿ ಹಾಗೂ ಗೃಹ ನಿರ್ಮಾಣ ಸಹಕಾರ ಸಂಘಗಳ ನೋಂದಣಿಗೆ ಸಂಬಂಧಪಟ್ಟಂತೆ ಸಹಕಾರ ಸಂಘಗಳ ನಿಬಂಧಕರ ಸುತ್ತೋಲೆ ಸಂ:ಆರ್‌ಎಸ್‌ಆರ್/226/ ಎಕ್ಸ್‌ಎಂಸಿ/2007-08, ದಿ:29.03.2008 ಮತ್ತು ಹೆಚ್‌ಎಸ್‌ಜಿ-3/26/ಹೆಚ್‌ಹೆಚ್‌ಎಸ್/2019-20 (ಭಾಗ-2) ದಿ:03/02/2020 ರಲ್ಲಿ ನೀಡಿರುವ ಮಾರ್ಗಸೂಚಿಗಳನ್ನು ಅನುಸರಿಸಿ ಷೇರು ಹಣ ಸಂಗ್ರಹಣೆಗೆ ಅನುಮತಿ ನೀಡಿ, ಅನುಮತಿಯ ಷರತ್ತುಗಳನ್ನು ಪೂರೈಸಿದ ನಂತರ ಸಹಕಾರ ಸಂಘಗಳ ಕಾಯ್ದೆ ಕಲಂ 7 ರಂತೆ ಗೃಹ ನಿರ್ಮಾಣ ಸಹಕಾರ ಸಂಘಗಳನ್ನು ನೋಂದಾಯಿಸಬೇಕಾಗಿರುತ್ತದೆ. ನೋಂದಣಿ ನಂತರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 30 ಬಿ ರಡಿ ಸರ್ಕಾರವು ನೀಡಿರುವ ನಿರ್ದೇಶನಗಳನ್ವಯ ಕಾರ್ಯನಿರ್ವಹಿಸಬೇಕಾಗಿದೆ. |
| ಇ) | ಸದರಿ ಗೃಹ ನಿರ್ಮಾಣ ಸಂಘಗಳಲ್ಲಿ ಎಷ್ಟು ಸಂಘಗಳು ಹಾಲಿ ಕಾರ್ಯನಿರ್ವಹಿಸುತ್ತಿವೆ ಹಾಗೂ ಎಷ್ಟು ಸಂಘಗಳಲ್ಲಿ ಕಾರ್ಯನಿರ್ವಹಣೆಯಾಗುತ್ತಿಲ್ಲ; | ವಿವರಗಳನ್ನು **ಅನುಬಂಧ -01** ರಲ್ಲಿ ನೀಡಲಾಗಿದೆ. |
| ಈ) | ಒಟ್ಟು ಸಹಕಾರ ಸಂಘಗಳಲ್ಲಿ ಎಷ್ಟು ಸಂಘಗಳಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಒಟ್ಟು 1314 ಗೃಹ ನಿರ್ಮಾಣ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ 43 ಗೃಹ ನಿರ್ಮಾಣ ಸಹಕಾರ ಸಂಘಗಳಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಉ) | ಅವ್ಯವಹಾರ ಎಸಗಿದ ಸಹಕಾರ ಸಂಘಗಳ ಸಂಖ್ಯೆ ಎಷ್ಟು ಮತ್ತು ಸಂಘ ಹಾಗೂ ಸಂಬಂಧಿಸಿದ ವ್ಯಕ್ತಿಗಳ ಮೇಲೆ ಸರ್ಕಾರ ಏನು ಕ್ರಮ ಜರುಗಿಸಿದೆ? | ಅವ್ಯವಹಾರವೆಸಗಿರುವ 34 ಗೃಹ ನಿರ್ಮಾಣ ಸಹಕಾರ ಸಂಘಗಳ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರಡಿ ಶಾಸನಬದ್ಧ ವಿಚಾರಣೆಗೆ ಹಾಗೂ 09 ಗೃಹ ನಿರ್ಮಾಣ ಸಹಕಾರ ಸಂಘಗಳ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 65 ರಡಿ ಪರಿವೀಕ್ಷಣೆಗೆ ಆದೇಶಿಸಲಾಗಿದೆ. |

**ಸಿಒ 11 ಸಿಹೆಚ್‌ಎಸ್ 2021 (ಇ)**

**(ಎಸ್.ಟಿ.ಸೋಮಶೇಖರ್)**
**ಸಹಕಾರ ಸಚಿವರು**

## ಅನುಬಂಧ–1

ದಿನಾಂಕ:31–01–2021 ಕ್ಕೆ ಇದ್ದಂತೆ ರಾಜ್ಯದಲ್ಲಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಮಾಹಿತಿ.

| ಕ್ರ | ಜಿಲ್ಲೆಯ ಹೆಸರು | ಕಾರ್ಯ ನಿರತ | ಸ್ಥಗಿತ | ಸಮಾಪನೆ | ಒಟ್ಟು |
|---|---|---|---|---|---|
| 1 | ಬೆಂಗಳೂರು 1ನೇ ವಲಯ | 136 | 9 | 19 | 164 |
| 2 | ಬೆಂಗಳೂರು 2ನೇ ವಲಯ | 106 | 4 | 17 | 127 |
| 3 | ಬೆಂಗಳೂರು 3ನೇ ವಲಯ | 59 | 4 | 5 | 68 |
| 4 | ಬೆಂಗಳೂರು 4ನೇ ವಲಯ | 191 | 0 | 19 | 210 |
| 5 | ಬೆಂಗಳೂರು ಗ್ರಾಮಾಂತರ ಜಿಲ್ಲೆ | 11 | 0 | 8 | 19 |
| 6 | ತುಮಕೂರು ಜಿಲ್ಲೆ | 29 | 1 | 15 | 45 |
| 7 | ಚಿತ್ರದುರ್ಗ ಜಿಲ್ಲೆ | 10 | 1 | 9 | 20 |
| 8 | ದಾವಣಗೆರೆ ಜಿಲ್ಲೆ | 21 | 4 | 8 | 33 |
| 9 | ಶಿವಮೊಗ್ಗ ಜಿಲ್ಲೆ | 29 | 0 | 11 | 40 |
| 10 | ಕೋಲಾರ ಜಿಲ್ಲೆ | 11 | 0 | 14 | 25 |
| 11 | ಚಿಕ್ಕಬಳ್ಳಾಪುರ ಜಿಲ್ಲೆ | 9 | 1 | 9 | 19 |
| 12 | ರಾಮನಗರ ಜಿಲ್ಲೆ | 7 | 2 | 5 | 14 |
| 13 | ಮೈಸೂರು | 259 | 7 | 21 | 287 |
| 14 | ಚಾಮರಾಜನಗರ. | 7 | 0 | 1 | 8 |
| 15 | ಮಂಡ್ಯ | 33 | 0 | 7 | 40 |
| 16 | ಹಾಸನ | 22 | 3 | 11 | 36 |
| 17 | ಚಿಕ್ಕಮಗಳೂರು | 10 | 0 | 1 | 11 |
| 18 | ಕೊಡಗು | 1 | 0 | 0 | 1 |
| 19 | ದಕ್ಷಿಣ ಕನ್ನಡ | 20 | 1 | 2 | 23 |
| 20 | ಉಡುಪಿ | 8 | 0 | 1 | 9 |
| 21 | ಬೆಳಗಾವಿ | 75 | 10 | 20 | 105 |
| 22 | ವಿಜಯಪುರ | 26 | 1 | 23 | 50 |
| 23 | ಬಾಗಲಕೋಟ | 24 | 4 | 7 | 35 |
| 24 | ಧಾರವಾಡ | 84 | 30 | 17 | 131 |
| 25 | ಗದಗ | 20 | 3 | 6 | 29 |
| 26 | ಹಾವೇರಿ | 13 | 2 | 6 | 21 |
| 27 | ಕಾರವಾರ | 13 | 0 | 3 | 16 |
| 28 | ಬಳ್ಳಾರಿ | 16 | 2 | 21 | 39 |
| 29 | ಬೀದರ | 9 | 13 | 23 | 45 |
| 30 | ಕಲಬುರಗಿ | 22 | 20 | 24 | 66 |
| 31 | ಕೊಪ್ಪಳ | 8 | 8 | 5 | 21 |
| 32 | ರಾಯಚೂರು | 19 | 13 | 6 | 38 |
| 33 | ಯಾದಗಿರಿ | 6 | 2 | 4 | 12 |
| | ಒಟ್ಟು | 1314 | 145 | 348 | 1807 |

(signature)

**ಸಹಕಾರ ಸಂಘಗಳ ಅಪರ ನಿಬಂಧಕರು**
(ವಸತಿ ಮತ್ತು ಇತರೆ)
ಸಹಕಾರ ಸಂಘಗಳ ನಿಬಂಧಕರ ಕಛೇರಿ.
ನಂ.1, ಅಲಿ ಅಸ್ಕರ್ ರಸ್ತೆ, ಬೆಂಗಳೂರು–560 052.